# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಬಾಲಪ್ಪನವರ ಹನುಮವ್ವ ಗಂಡ ಲೇಟ್ ಬಿ.ಹಾಲಪ್ಪ,<br>ಕೆ.ವೀರಾಪುರ ಗ್ರಾಮ, ಹಡಗಲಿ ತಾ. | 1)ಬಿ.ಹೊನ್ನಪ್ಪ ತಂದೆ ಹನುಮಪ್ಪ,<br>2)ಬಿ.ದೇವಪ್ಪ ತಂದೆ ಹನುಮಪ್ಪ,<br>3)ಬಿ.ವೆಂಕಟೇಶ ತಂದೆ ಹನುಮಪ್ಪ,<br>4)ಬಿ.ಅವಿನಾಶ ತಂದೆ ಪುಟ್ಟಪ್ಪ,<br>ಕೆ.ವೀರಾಪುರ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಕೆ.ವೀರಾಪುರ | 38/ಎ | 3-13 | ಖುಷ್ಕಿ |
| 2. | ,, | 38/ಬಿ | 3-33 | ,, |
| 3. | ,, | 59/ಎ | 0-11 | ,, |
| 4. | , | 75/ಡಿ | 1-50 | ,, |

*****

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಕೆ.ವೀರಾಪುರ ಗ್ರಾಮದ ಸ.ನಂ.38/ಎ ವಿ:3-13 ಎಕ್ರೆ, 38/ಬಿ ವಿ:3-33 ಎಕ್ರೆ, 59/ಎ ವಿ:0-11 ಎಕರೆ ಹಾಗೂ 75/ಡಿ ವಿ:1-50 ಎಕರೆ ಜಮೀನುಗಳಿಗೆ ಸಂಬಂಧಿಸಿದಂತೆ, ಕೆ.ವೀರಾಪುರ ಗ್ರಾಮದ ನಿವಾಸಿಯಾದ ಬಾಲಪ್ಪನವರ ಹನುಮವ್ವ ಗಂಡ ಬಿ.ಹಾಲಪ್ಪ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:18-12-2014 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 31-12-2014 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:19-01-2015 ರಂದು ಕೆ.ವೀರಾಪುರ ಗ್ರಾಮದ ನಿವಾಸಿಯಾದ 1)ಬಿ.ಹೊನ್ನಪ್ಪ ತಂದೆ ಹನುಮಪ್ಪ, 2)ಬಿ.ದೇವಪ್ಪ ತಂದೆ ಹನುಮಪ್ಪ, 3)ಬಿ.ವೆಂಕಟೇಶ ತಂದೆ ಹನುಮಪ್ಪ, ಮತ್ತು 4)ಬಿ.ಅವಿನಾಶ ತಂದೆ ಪುಟ್ಟಪ್ಪ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.23/2014-15 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿನಾಂಕ 23-04-2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಲಿಖಿತ ಹೇಳಿಕೆ, ವಂಶವೃಕ್ಷ ಪ್ರತಿಯನ್ನು ಸಲ್ಲಿಸುತ್ತಾ ಸದರಿ ಹಕ್ಕು ಬದಲಾವಣೆಯನ್ನು ಮಾಡಬಾರದೆಂದು ಕೋರಿರುತ್ತಾರೆ. ಅರ್ಜಿದಾರರು ಹಾಜರಾಗಿ ಲಿಖಿತ ಹೇಳೀಕೆ, ನೋಂದಾಯಿತವಲ್ಲದ ಪಾಲು ವಿಭಾಗ, ಮರಣ ಪ್ರಮಾಣ ಪತ್ರದ ಪ್ರತಿ, ವಂಸವೃಕ್ಷದ ಪ್ರತಿ ಸಲ್ಲಿಸುತ್ತಾ, ಸದರಿ ಆಸ್ತಿಗಳು ನನ್ನ ಗಂಡನ ಹೆಸರಿನಲ್ಲಿದ್ದು, ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿದರು.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಅರ್ಜಿದಾರರು ಸಲ್ಲಿಸಿದ ಖಾತಾ ಬಲಾವಣೆಯ ಆಸ್ತಿಗಳು ಪಿತ್ರಾರ್ಜಿತ ಆಸಿಗಳಾಗಿದ್ದು, ಇಲ್ಲಿಯವರೆಗೆ ವಾದಿಗಳ ಹಾಗೂ ಪ್ರತಿವಾದಿಗಳ ತಂದೆಯವರ ನಡುವೆ ಪಾಲುವಿಭಾಗವಾಗಿರುವುದಿಲ್ಲ. ಇಂದಿನವರೆಗೂ ವಾದಿ ಮತ್ತು ಪ್ರತಿವಾದಿಗಳುಯ ಏಕಸ್ತರಾಶಗ ಸದರಿ ಜಮೀನುಗಳ ಸ್ವಾಧೀನ ಹಾಗೂ ಅನುಭೋಗದಲ್ಲಿರುತ್ತವೆ. ಆದುದರಿಂದ ವಾದಸಿ ಸಲ್ಲಿಸಿದ ಖಾತಾ ಬದಲಾವಣೆ ಅರ್ಜಿ ಕಾನೂನು ರೀತ್ಯ ಊರ್ಜಿತವಲ್ಲ. ವಾದಿಗಳ ಗಂಡ ಹಾಲಪ್ಪ ಹಾಗೂ ಪ್ರತಿವಾದಿಗಳ ತಂದೆ ಬಿ.ಹನುಮಪ್ಪ ಹಾಗೂ ದೊಡ್ಡಹನುಮಪ್ಪ, ಸಣ್ಣಭೀಮಪ್ಪ , ಹಾಲವ್ವ ಇವರ ನಡುವೆ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ. ವಾದಿಗಳು ಹೇಳಿದ ಹಾಗೆ 40 ವರ್ಷಗಳ ಹಿಂದೆ ಬೇರೆಯಾಗಿದ್ದೇವೆ. ಅಲ್ಲಿಂದ ಇಲ್ಲಿಯವರೆಗೂ ಸಹ ನಮ್ಮಲ್ಲಿ ಯಾವುದೇ ತೆರನಾದ ದಾಖಲೆಗಳು ನಮ್ಮಲ್ಲಿ ಇಲ್ಲ. ಪ್ರತಿಯೊಂದು ದಾಖಲೆಗಳು ವಾದಿಗಳ ಹತ್ತಿರ ಇದ್ದು, ಅವುಗಳನ್ನು ಬಚ್ಚಿಟ್ಟುಕೊಂಡುನಮಗೆ ಯಾವುದೇ ಮಾಹಿತಿ ತಿಳಿಸದೇ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಖಾತೆ ಬದಲಾವಣೆ ಮಾಡಿಕೊಂಡು ನಮಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ಆಸ್ತಿಗಳನ್ನು ಪರಭಾರೆ ಮಾಡುತ್ತಾಸ ಹೊರಟಿರುತ್ತಾಳೆ. ಆದುದರಿಂದ ವಾದಿ ಸಲ್ಲಿಸಿದ ಖಾತಾ ಬದಲಾವಣೆ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ತಕರಾರುದಾರರು ಸಲ್ಲಿಸಿದ ಕೈ ಬರಹ ವಂಶವೃಕ್ಷ ಪ್ರತಿಯಲ್ಲಿ ಬಾಲಪ್ಪನವರ ಓಬಪ್ಪ ಮತ್ತು ಲಕ್ಕಮ್ಮ ಇವರಿಗೆ 1)ದೊಡ್ಡಹನುಮಪ್ಪ, 2)ಸಣ್ಣಭೀಮಪ್ಪ, 3)ಹಾಲಪ್ಪ ಮತ್ತು 4)ಹಾಲಮ್ಮ ಇವರ ಮಕ್ಕಳಾಗಿರುತ್ತಾರೆ. ಇದರಲ್ಲಿ ಹಾಲಪ್ಪನ ಹೆಂಡತಿಯೇ ಅರ್ಜಿದಾರರು.

ಅರ್ಜಿದಾರರರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಕೆ.ವೀರಾಪುರ ಗ್ರಾಶಮದ ನಿವಾಸಿಗಳಾದ ಬಾಲಪ್ಪನವರ ಓಬಪ್ಪನ ಮಕ್ಕಳಾದ ದಿ//ಬಾಲಪ್ಪನವರ ದೊಡ್ಡ್ಹನುಮಪ್ಪ, ದಿ//ಬಾಲಪ್ಪನವರ ಸಣ್ಣಭೀಮಪ್ಪ, ದಿ//ಬಾಲಪ್ಪನವರ ಹಾಲಪ್ಪ ಇವರುಗಳು ಗ್ರಾಮಸ್ಥರ ಸಮ್ಮುಖದಲ್ಲಿ 12–5–1974 ರಲ್ಲಿ ಚರ–ಸ್ಥಿರಾಸ್ತಿಯನ್ನು ಪಾಲುವಿಭಾಗ ಮಾಡಿಸಿಕೊಂಡಿರುತ್ತಾರೆ. ಈಗ ಇವರುಗಳು ಮೋತಿಯಾಗಿದ್ದು, ಅವರವರ ಆಸ್ತಿಯನ್ನು ಅವರ ಮಕ್ಕಳ ಸ್ವಾಧೀನದಲ್ಲಿವೆ. ಬಾಲಪ್ಪನವರ ಹಾಲಪ್ಪನ ಪತ್ನಿಯಾದ ತನಗೆ ತನ್ನ ಗಂಡ್ನಿಗೆ ಬರುವ ಎಲ್ಲಾ ಆಸ್ತಿಗಳ ಹಕ್ಕು ಬದಲಾವಣೆ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ನೋಂದಾಯಿವಲ್ಲದ ಪಾಲುವಿಭಾಗದಲ್ಲಿ ಸರ್ವೆ ನಂಬರ್ ಮತ್ತು ವಿಸ್ತೀರ್ಣಗಳು ಕಾಣುತ್ತಿಲ್ಲ. ಹಾಲಿ ಮೇಲ್ಕಂಡ ಜಮೀನುಗಳು ಹಾಲಪ್ಪ ಬಾಲಪ್ಪನವರ ತಂದೆ ಓಬಪ್ಪ ವೀರಾಪುರ ಇವರ ಹೆಸರಿಗೆ ಕಾಲಂ 9 ರಲ್ಲಿ ನಮೂದು ಆಗಿರುತ್ತದೆ. ಸದರಿ ಜಮೀನುಗಳು 1968–69ನೇ ಇಸ್ವಿಯಿಂದಲೇ ಬಾಲಪ್ಪನವರ ಹಾಲಪ್ಪ ತಂದೆ ಓಬಪ್ಪ ಇವರ ಹೆಸರಿಗೆ ನಮೂದುಗಳು ಇರುತ್ತವೆ. ಈ ಕಾರ್ಯಾಲಯದಲ್ಲಿ ಇರುವ ಕೈ ಬರಹ ಪಹಣಿ ಪುಸ್ತಕಗಳನ್ನು ಪರಿಶೀಲಿಸಲಾಗಿ 1968–69 ರಿಂದಲೇ ಸದರಿ ಸರ್ವೆ ನಂಬರುಗಳ ಅಕ್ಕಪಕ್ಕದ ಜಮೀನುಗಳು ಅವರವರ ಹೆಸರಿಗೆ ಅಂದರೆ ಸ.ನಂ.37/ಎ ವಿ:4–01 ಎಕ್ರೆ ಜಮೀನು ಬಾಲಪ್ಪನವರ ದೊಡ್ಡಹನ್ಮಪ್ಪ ತಂದೆ ಓಬಪ್ಪ ಇವರ ಹೆಸರಿಗೆ, ಸ.ನಂ.37/ಬಿ ವಿ:2–07 ಎಕರೆ, ಸ.ನಂ.37/ಸಿ ವಿ:2–64 ಎಕ್ರೆ, 37/ಡಿ ವಿ:3–06 ಎಕ್ರೆ ಜಮೀನುಗಳು ಬಾಲಪ್ಪನವರ ಸಣ ಭೀಮಪ್ಪ ತಂದೆ ಓಬಪ್ಪ ಇವರ ಹೆಸರಿಗೆ, 38/ಎ ವಿ:3–13 ಎಕ್ರೆ, ಜಮೀನು ಬಾಲಪ್ಪನವರ ಓಬಪ್ಪನ ಮಗ ಹಾಲಪ್ಪ ವೀರಾಪುರ ಇವರ ಹೆಸರಿಗೆ, 38/ಬಿ ವಿ:3–33 ಎಕ್ರೆ ಮತ್ತು 38/ಡಿ ವಿ:2–62 ಎಕ್ರೆ ಜಮೀನು ಬಾಲಪ್ಪನವರ ಹಾಲಪ್ಪ ತಂದೆ ಓಬಪ್ಪ ಇವರ ಹೆಸರಿಗೆ, 59/ಎ ವಿ:0–11 ಎಕ್ರೆ ಬಾಲಪ್ಪನವರ ಹಾಲಪ್ಪ ತಂದೆ ಓಬಪ್ಪ ಇವರ ಹೆಸರಿಗೆ, 61/ಎ/2ಎ ವಿ:5–32 ಎಕ್ರೆ ಬಾಲಪ್ಪನವರ ಓಬಪ್ಪ ತಂದೆ ಭೀಮಪ್ಪ ಇವರ ಹೆಸರಿಗೆ, 61/ಬಿ ವಿ:0–18 ಎಕ್ರೆ ಬಾಲಪ್ಪನವರ ದೊಡ್ಡಹನ್ಮಂತಪ್ಪ ಇವರ ಹೆಸರಿಗೆ, 75/ಬಿ ವಿ:1–68 ಎಕ್ರೆ ಬಾಲಪ್ಪನವರ ದೊಡ್ಡಹನ್ಮಪ್ಪ ಉರ್ಫ ದೊಡ್ಡ ಮುದಿಯಪ್ಪ ಇವರ ಹೆಸರಿಗೆ, 75/ಸಿ ವಿ:1–57 ಎಕ್ರೆ ಬಾಲಪ್ಪನವರ ಸಣ ಭೀಮಪ್ಪ ತಂದೆ ಓಬಪ್ಪ ಇವರ ಹೆಸರಿಗೆ, 75/ಡಿ ವಿ:1–50 ಎಕ್ರೆ ಬಾಲಪ್ಪನವರ ಹಾಲಪ್ಪ ತಂದೆ ಓಬಪ್ಪ ವೀರಾಪುರ ಇವರ ಹೆಸರಿಗೆ, 75/ಇ ವಿ:2–17 ಎಕ್ರೆ ಬಾಲಪ್ಪನವರ ಸಣ ಭೀಮಪ್ಪ ತಂದೆ ಓಬಪ್ಪ ಇವರ ಹೆಸರಿಗೆ, 76/ಎ ವಿ:0–90 ಎಕ್ರೆ ಬಾಲಪ್ಪನವರ ಸಣ ಭೀಮಪ್ಪ ಇವರ ಹೆಸರಿಗೆ 1968–69 ರಿಂದ 1980–81 ರ ವರೆಗಿ ಕೈ ಬರಹ ಪಹಣಿ ಕಾಲಂ ನಂ.9 ರಲ್ಲಿ ನಮೂದು ಇರುತ್ತವೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ 1968–69 ಕ್ಕಿಂತ ಮೊದಲೇ ಜಮೀನುಗಳು ಹಿಸ್ಸಾ ಪ್ರಕಾರ ಹಂಚಿಕೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ ಕಾಲಂ ನಂ.10 ರಲ್ಲಿ ಕೆಲವು ಕಡೆ ಹಿಸ್ಸಾ ಪ್ರಕಾರ ಎಂದು ಕೆಲವು ಕಡೆ ಅನುಭವ ಪ್ರಕಾರ ಎಂದು ನಮೂದುಗಳು ಇರುತ್ತವೆ. ಇದರಿಂದ ಈಗಾಗಲೇ ಆಸ್ತಿಯನ್ನು ಅನುಭವ ಪ್ರಕಾರ ಅವರವರ ಹೆಸರಿಗೆ ಪಹಣಿಗಳು ಪ್ರತ್ಯೇಕವಾಗಿ ಇರುತ್ತವೆ. ತಕರಾರುದಾರರು ತಿಳಿಸುವ ತಕರಾರಿನಲ್ಲಿ ಯಾವುದೇ ಹುರುಳಿಲ್ಲ. ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಮೇಲ್ಕಂಡ ಜಮೀನುಗಳು 1968–69 ರಿಂದಲೇ ಬಾಲಪ್ಪನವರ ಹಾಲಪ್ಪ ತಂದೆ ಓಬಪ್ಪ ಇವರ ಹೆಸರಿಗೆ ಇದ್ದು, ಇವರ ಮೋತಿಯಾಗಿರುವುದರಿಂದ ಅವರ ಪತ್ನಿಯಾದ ಬಾಲಪ್ಪನವರ ಹನುಮವ್ವ ಗಂಡ ಬಿ.ಹಾಲಪ್ಪ ಇವರು ಮೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/05/2015–16 ದಿನಾಂಕ:04–04–2016

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.23/2014–15 ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಿಸ್ಕರಿಸುತ್ತಾ ಮೋತಿ ವಾರಸಾ ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಸದರಿ ಆದೇಶದಿಂದ ಬಾದೆಯುಂಟಾದಲ್ಲಿ ತಕರಾರುದಾರರು ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.